1	2	3	4	5	6	7
12.	ಚಿಕ್ಕಮಗಳೂರು	06	–	–	02	04
13.	ದಕ್ಷಿಣ ಕನ್ನಡ	07	01	02	02	02
14.	ಉಡುಪಿ	06	–	–	01	05
15.	ಕೊಡಗು	02	–	–	–	02
16.	ಬೆಳಗಾಂ	15	02	07	04	02
17.	ಧಾರವಾಡ	07	06	–	01	–
18.	ಹಾವೇರಿ	06	05	01	–	–
19.	ಗದಗ್	05	03	02	–	–
20.	ಬಿಜಾಪುರ	08	11	01	02	–
21.	ಬಾಗಲಕೋಟೆ	06	–	–	–	–
22.	ಗುಲ್ಬರ್ಗಾ	12	–	–	01	09
23.	ಬೀದರ್	06	02	02	03	–
24.	ಬಳ್ಳಾರಿ	07	03	–	–	04
25.	ರಾಯಚೂರು	05	–	04	01	–
26.	ಕೊಪ್ಪಳ	05	01	02	02	–
27.	ಉತ್ತರ ಕನ್ನಡ	03	03	–	–	–
	ಒಟ್ಟು	189	42	59	51	36

ಇ) ಈ ಯೋಜನೆಯ ಅನುಷ್ಠಾನಕ್ಕಾಗಿ ಕರ್ನಾಟಕ ನೀರಾವರಿ ನಿಗಮದಿಂದ 20.00 ಕೋಟಿ ರೂ.ಗಳ ಸಹಾಯ ಧನ ದೊರೆತಿದೆ. 2003–04ನೇ ಆಯವ್ಯಯದಲ್ಲಿ 10.00 ಕೋಟಿ ರೂ.ಗಳ ಅನುದಾನ ಒದಗಿಸಿಕೊಳ್ಳಲಾಗಿದೆ. ಅಲ್ಲದೆ ಬರಪೀಡಿತ ತಾಲ್ಲೂಕುಗಳಲ್ಲಿ ಕೂಲಿಗಾಗಿ ಕಾಳು ಯೋಜನೆಯಡಿ ಸಹ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಈ) ಪ್ರಶ್ನೆ 'ಆ' ನಲ್ಲಿ ನೀಡಿರುವ ಉತ್ತರದಂತೆ

ಉ) ಮೊದಲನೇ ಹಂತದ ಹೆಚ್ಚಿನ ಕೆರೆಗಳನ್ನು ಇನ್ನು ಎರಡು ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು.

ಬೆಳ್ತಂಗಡಿ ತಾಲ್ಲೂಕಿನಲ್ಲಿ ಸೇತುವೆ ನಿರ್ಮಾಣ

4444 (4943) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನ ತೆಂಕಕಾರಂದೂರು 'ಗ್ರಾಮದ' 'ಗಿಳಿ ಕಾಪು' ಎಂಬಲ್ಲಿನ 'ಕಿಂಡಿ' ಅಣೆಕಟ್ಟೆಗೆ ಸೇತುವೆ ನಿರ್ಮಾಣದ ಬಗ್ಗೆ 15 ವರ್ಷಗಳಿಂದ ಇರುವ ಬೇಡಿಕೆಯನ್ನು ಸರ್ಕಾರ ಗಮನಿಸಿದೆಯೇ; ಹೌದಾದಲ್ಲಿ ಯಾವಾಗ ಸೇತುವೆ ನಿರ್ಮಾಣವನ್ನು ಕೈಗೊಳ್ಳಲಾವುದು

ಆ) ಸದರಿ ಕಾಮಗಾರಿಗಳ ವಿವರಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) ಹೌದು. ಈ ಪ್ರಸ್ತಾವನೆಯು ಈ ಸಾಲಿನ ಆಯವ್ಯಯದಲ್ಲಿ ಸೇರಿರುವುದಿಲ್ಲ.

ಆ) ಪ್ರಸ್ತಾವಿತ ಕಾಮಗಾರಿಯಡಿ ಸೇತುವೆ ಸಹಿತ ಕಿಂಡಿ ಅಣೆಕಟ್ಟು ನಿರ್ಮಾಣದಲ್ಲಿ 48 ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸುವುದರೊಂದಿಗೆ ಸಂಪರ್ಕವನ್ನು ಸಹ ಕಲ್ಪಿಸಬಹುದಾಗಿದೆ.

ವೃತ್ತಿ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೆಚ್ಚಳವಾಗಿರುವ ಫೀ ಮತ್ತು ಭೋದನಾ ಶುಲ್ಕದ ಪುನರ್ ಪರಿಶೀಲನೆ

4495 (5316) : ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವೃತ್ತಿ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಹೆಚ್ಚಳವಾಗಿ ನಿಗದಿಯಾಗಿರುವ ಫೀ ಹಾಗೂ ಇತರೆ ಬೋಧನಾ ಶುಲ್ಕಗಳು ಶ್ರೀ ಸಾಮಾನ್ಯನಿಗೆ ತುಂಬಾ ಹೊರೆಯಾಗಿದ್ದು, ಇದನ್ನು ಪುನರ್ ಪರಿಶೀಲಿಸಬೇಕೆಂದು ಒತ್ತಾಯಿಸಿ ಪಾಲಕರು ಪೋಷಕರು ಮತ್ತು ವಿಧ್ಯಾರ್ಥಿ ಸಮುದಾಯ ಸರಕಾರಕ್ಕೆ ಏನಾದರೂ ಮನವಿ ಮಾಡಿದ್ದಾರೆಯೇ;

ಆ) ಮನವಿ ಮಾಡಿದ್ದಲ್ಲಿ ಈ ಬಗೆಗೆ ಪರಿಶೀಲಿಸಲಾಗುವುದೇ?

ಶ್ರೀ ಡಾ.ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು)

ಅ) ಹೌದು.

ಆ) ವೃತ್ತಿ ಶಿಕ್ಷಣ ಪ್ರವೇಶ ನೀತಿಗೆ ಸಂಬಂಧಿಸಿದಂತೆ ಕರ್ನಾಟಕದ ಉಚ್ಚ ನ್ಯಾಯಾಲಯವು ತನ್ನ ಮಧ್ಯಂತರ ಆದೇಶದಲ್ಲಿ ಪ್ರಸ್ತುತ ವರ್ಷಕ್ಕೆ ಸೀಮಿತವಾಗಿರುವಂತೆ ಸೀಟುಗಳ ವರ್ಗೀಕರಣ ಹಾಗೂ ವಿವಿಧ ಕೋರ್ಸುಗಳಿಗೆ ಶುಲ್ಕವನ್ನು ನಿಗದಿಪಡಿಸಿದೆ ಹಗೂ ಶುಲ್ಕ ನಿಯಂತ್ರಣ ಸಮಿತಿಯು ಶುಲ್ಕ ಎಷ್ಟು ನಿಗದಿಪಡಿಸಬೇಕೆಂಬ ಬಗ್ಗೆ ಸಂಬಂಧಪಟ್ಟ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ 15 ದಿನಗಳೊಳಗಾಗಿ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದ್ದು, ಅವುಗಳನ್ನು ಕೂಲಂಕುಷವಾಗಿ ಪರಿಶೀಲಿಸಿ 45 ದಿನಗಳ ಒಳಗಾಗಿ ಶುಲ್ಕಗಳ ಬಗ್ಗೆ ಸ್ಪಷ್ಟ ನಿಲುವನ್ನು ನ್ಯಾಯಾಲಯಕ್ಕೆ ತೀಳಿಸುವಂತೆ ಆದೇಶಿಸಿದೆ. ನ್ಯಾಯಾಲಯದ ಆದೇಶದ ಅನ್ವಯ ಪ್ರಸ್ತಾವನೆ ನೀಡುವಂತೆ ಎಲ್ಲಾ ವೃತ್ತಿಪರ ಕಾಲೇಜುಗಳಿಗೆ ಈಗಾಗಲೇ ಸುಚಿಸಲಾಗಿದೆ. ಈ ಮಧ್ಯೆ ಉಚ್ಚ ನ್ಯಾಯಾಲಯವು ನೀಡಿರುವ ಮಧ್ಯಂತರ ಆದೇಶದ ಮೇಲೆ ಕೆಲವೊಂದು ಶಿಕ್ಷಣ ಸಂಸ್ಥೆಗಳು ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು ಪ್ರಕರಣ ದಾಖಲಾಗಿದ್ದು ವಿಚಾರಣೆ ನಡೆಯುತ್ತಿದ್ದು ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ನಂತರ ಈ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಕಿರಿಯ ಕಾಲೇಜುಗಳಿಗೆ ಅನುದಾನ

4491 (5287) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪದವಿ ಪೂರ್ವ ತರಗತಿಗಳನ್ನು ನಡೆಸುತ್ತಿರುವ ಎಷ್ಟು ಕಿರಿಯ ಕಾಲೇಜುಗಳಿಗೆ ಅನುದಾನ ನೀಡಲಾಗುತ್ತಿದೆ; ಈ ಅನುದಾನದ ಮೊತ್ತವೆಷ್ಟು; (ಜಿಲ್ಲಾವಾರು, ಶಿವಮೊಗ್ಗ ಜಿಲ್ಲೆಯ ಶಿಕ್ಷಣ ಸಂಸ್ಥೆವಾರು ವಿವರ ನೀಡುವುದು)

ಆ) ಅನುದಾನ ನೀಡಲು ದಾಖಲೆ ಮಾದರಿ ಸೂತ್ರ ಏನಾದರೂ ರೂಪಿಸಿದೆಯೆ ಮತ್ತು ಈ ಮಾದರಿ ಸೂತ್ರವನ್ನು ಪಾಲಿಸುತ್ತಿರುವ ಸಂಸ್ಥೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)